# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 54/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 22-12-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಆನಂದ ದೋಣಿ | **ಪ್ರಾ.ಸಾ ಃ 11** |
| **ತಂದೆ ಃ ಗಂಡ ಹೆಸರು** | ಃ | ಅಪ್ಪಣ್ಣ | **ಚಾ.ಸಾ ಃ 12** |
| **ವಯಸ್ಸು** | ಃ | 44 ವರ್ಷ | |
| **ಉದ್ಯೋಗ** | ಃ | ಪೋಲೀಸ ನೀರಿಕ್ಷಕರು, ಲೋಕಾಯುಕ್ತ, ವಿಜಯಪುರ | |
| **ವಾಸಸ್ಥಳ** | ಃ | ವಿಜಯಪುರ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನಾನು ದಿನಾಂಕ 29.09.2017 ರಿಂದ 12.10.2019 ರವರೆಗೆ ಕಲಘಟಗಿ ಪೋಲೀಸ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯನಿರ್ವಹಿಸಿದ್ದೇನೆ.

ದಿನಾಂಕ 12.10.2017 ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-11 ರವರಿಂದ ವಹಿಸಿಕೊಂಡು ಅದೇ ದಿನ ಎಸ್ ಬಿ ಎಂ ಶಾಖೆ ಕಲಘಟಗಿಯವರಿಗೆ 1ನೇ ಆರೋಪಿಯು ಸಾಲ ಪಡೆದುಕೊಳ್ಳಲು ಸಲ್ಲಿಸಿದ ದಾಖಲೆಗಳನ್ನು ಪಡೆದುಕೊಳ್ಳಲು ನೋಟೀಸ ನೀಡಿರುತ್ತೇನೆ. ದಿನಾಂಕ 31.10.2017 ರಂದು ಚಾಸಾ-1 ರವರು ದಾಖಲೆಗಳನ್ನು ಹಾಜರ ಪಡಿಸಿರುತ್ತಾರೆ. ಅದನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-2 ರಂತೆ ಮಧ್ಯಾಹ್ನ 3-45 ರಿಂದ 5-00 ಗಂಟೆವರೆಗೆ ಪಂಚನಾಮೆ ಜರುಗಿಸಿ ಜಪ್ತಿ ಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ನಿಪಿ-3 ರಂತೆ ಪೋಟೋ ತೆಗೆಸಿರುತ್ತೇನೆ. ನಿಪಿ-2 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಉಪನೋಂದಣಿ ಅಧಿಕಾರಿಗಳು, ಹೊಸಪೇಟೆ ರವರಿಗೆ ಭಾಗ್ಯಲಕ್ಷ್ಮಿ ಮೋಟರ್ಸ ನೋಂದಣಿ ಆದ ಕುರಿತು ದಾಖಲೆ ಹಾಜರ ಪಡಿಸುವಂತೆ ಕೋರಿದ್ದು ಸದರಿಯವರು ದಿನಾಂಕ 04.11.2017 ರಂದು ಮಾಹಿತಿ ನೀಡಿರುತ್ತಾರೆ. ದಿನಾಂಕ 02.05.2019 ರಂದು ವ್ಯವಸ್ಥಾಪಕರು ಕಾರ್ಪೋರೇಷನ ಬ್ಯಾಂಕ ಧಾರವಾಡರವರು ನೀಡಿದ ಮಾಹಿತಿ ಪತ್ರವನ್ನು ಕಡತಕ್ಕೆ ಅಳವಡಿಸಲಾಗಿದೆ ಅದನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದೆ. ದಿನಾಂಕ 31.07.2017 ರಂದು ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ತುಮರಿಕೊಪ್ಪ ರವರಿಗೆ 1ನೇ ಆರೋಪಿಯ ಆಸ್ತಿ ಕುರಿತು ವಿವರ ಕೋರಿ ಪತ್ರ ಬರೆದಿರುತ್ತೇನೆ. ಆಸ್ತಿಗಳು ಇಲ್ಲ ಎಂದು ವರದಿ ನೀಡಿರುತ್ತಾರೆ.

ದಿನಾಂಕ 05.05.2019 ರಂದು ಚಾಸಾ-1 ರವರ ಮರು ಹೇಳಿಕೆ ಪಡೆದಿರುತ್ತೇನೆ. ದಿನಾಂಕ 29.06.2019 ರಂದು 1ನೇ ಆರೋಪಿಯನ್ನು ಬಂಧಿಸಿ ನನ್ನ ಮುಂದೆ ಹಾಜರ ಪಡಿಸಿದ್ದು ಆತನನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿದ್ದೇನೆ. ಆರೋಪಿಯ ಸ್ವಖುಷಿ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 31.10.2017 ರಂದು ಚಾಸಾ-3 ರವರ ಹೇಳಿಕೆ ಹಾಗೂ ದಿನಾಂಕ 05.05.2019 ರಂದು ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 31.10.2017 ರಂದು ಚಾಸಾ-6 ರವರ ಹೇಳಿಕೆ ಹಾಗೂ ದಿನಾಂಕ 05.05.2019 ರಂದು ಮರು

ಹೇಳಿಕೆ ಪಡೆದಿರುತ್ತೇನೆ. ದಿನಾಂಕ 30.10.2017 ರಂದು ಚಾಸಾ-10 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 23.08.2019 ರಂದು ಚಾಸಾ-7 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 20.05.2019 ರಂದು ಚಾಸಾ-9 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 02.05.2019 ರಂದು ಚಾಸಾ-8 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾಸಾ-7 ರವರು ದಾಖಲೆಗಳನ್ನು ಹಾಜರ ಪಡಿಸಿದ್ದು ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಆರೋಪಿತರ ವಿರುದ್ಧ ಮೇಲ್ನೋಟಕ್ಕೆ ಅಪರಾಧ ಮಾಡಿದ್ದಾರೆಂದು ತನಿಖೆಯಿಂದ ಕಂಡು ಬಂದಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ. ನಾನು ಬಂಧಿಸಿ ಬಿಡುಗಡೆ ಮಾಡಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಾನು ಎರಡು ರೀತಿಯಲ್ಲಿ ಕನ್ನಡ ಹಾಗೂ ಇಂಗ್ಲೀಷನಲ್ಲಿ ಸಹಿ ಮಾಡಿರುತ್ತೇನೆ. ಈ ಬಗ್ಗೆ ಪ್ರಮಾಣ ಪತ್ರ ಹಾಜರ ಪಡಿಸಿಲ್ಲ. ದೋಷಾರೋಪಣ ಪಟ್ಟಿಯಲ್ಲಿ ಕನ್ನಡ ಹಾಗೂ ಪಂಚನಾಮೆಯಲ್ಲಿ ಇಂಗ್ಲೀಷನಲ್ಲಿ ಸಹಿ ಮಾಡಿದ್ದು ಎರಡು ಸಹಿಗಳು ನನ್ನದೆ ಇರುತ್ತದೆ. ದಾಖಲೆಗಳಲ್ಲಿರುವ ಸಹಿಗಳು ನನಗೆ ಸೇರಿದ್ದಲ್ಲ ಅಂದರೆ ಸರಿಯಲ್ಲ. ನಾನು ಎರಡು ರೀತಿಯ ಸಹಿ ಮಾಡುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಿಪಿ-1 ರಲ್ಲಿ 4 ನೇ ಆರೋಪಿಯ ಹೆಸರು ಇರುವುದಿಲ್ಲ ಅಂದರೆ ನಿಜ. ಆರೋಪಿತರ ಸ್ವಖುಷಿ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರು ನನ್ನ ಸಮಕ್ಷಮ ಯಾವುದೆ ಹೇಳಿಕೆಗಳನ್ನು ನೀಡಿಲ್ಲ ಅಂದರೆ ಸರಿಯಲ್ಲ. ಚಾಸಾ-4 ಮತ್ತು 5 ರವರು ಸರಕಾರಿ ನೌಕರರು ಅಂದರೆ ನಿಜ. ಚಾಸಾ-2 ಮತ್ತು 3 ರವರು ಕರ್ತವ್ಯ ಮುಗಿಸಿಕೊಂಡು ಬಂದಿದ್ದರು. ಚಾಸಾ-4 ಮತ್ತು 5 ರವರು ಮೇಲಾಧಿಕಾರಿಗಳ ಅನುಮತಿ ಪಡೆದುಕೊಂಡ ಬಗ್ಗೆ ದಾಖಲೆ ಪಡೆದುಕೊಂಡಿಲ್ಲ. ಚಾಸಾ-1 ರವರು ದಾಖಲೆಗಳನ್ನು ಹಾಜರ ಪಡಿಸುವಾಗ ಮೇಲಾಧಿಕಾರಿಗಳಿಂದ ಅನುಮತಿ ಪಡೆದುಕೊಂಡಿದ್ದರು ಎನ್ನುವ ವಿಷಯ ನನ್ನ ವ್ಯಾಪ್ತಿಗೆ ಬರುವುದಿಲ್ಲ. ಸಾಕ್ಷಿ ಮುಂದುವರೆದು ಚಾಸಾ-1 ರವರು ನಾನು ನೀಡಿದ ನೋಟೀಸಗೆ ಉತ್ತರವಾಗಿ ಹಾಜರ ಪಡಿಸಿದ್ದು ಸದರಿಯವರು ಮೇಲಾಧಿಕಾರಿಗಳ ಅನುಮತಿ ಪಡೆದುಕೊಂಡಿರುವುದು ನನಗೆ ಗೊತ್ತಿಲ್ಲ. ಚಾಸಾ-1 ರವರ ಹೇಳಿಕೆಯನ್ನು ನಾನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ.

ಚಾಸಾ-1 ರವರು ಹಾಜರ ಪಡಿಸಿದ ದಾಖಲೆಗಳು ದೃಡಿಕೃತ ಪ್ರತಿಗಳು ಎನ್ನುವ ಬಗ್ಗೆ ದೃಡಿಕರಣ ಇರುವುದಿಲ್ಲ ಅಂದರೆ ನಿಜ. ಮೂಲ ಪ್ರತಿಗಳ ದೃಡಿಕೃತ ಪ್ರತಿಗಳು ಎಂದು ನಾನು ದಾಖಲೆಗಳ ಮೇಲೆ ದೃಡಿಕರಿಸಿಲ್ಲ ಅಂದರೆ ನಿಜ. ನಿಪಿ-4, 6 ರಿಂದ 9, 13, 14 ರ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ದೃಡಿಕೃತ ಪ್ರತಿಗಳು ಎಂದು ದೃಡಿಕರಣ ಮಾಡಿಲ್ಲ ಅಂದರೆ ನಿಜ. ಸಾಕ್ಷಿ ಮುಂದುವರೆದು ಬ್ಯಾಂಕ ಗಣಕಿಕೃತ ದಾಖಲೆ ಆಗಿದ್ದು

ಅವುಗಳನ್ನು ದೃಡಿಕರಣ ಮಾಡಲು ಬರುವುದಿಲ್ಲ ಎಂದು ಬ್ಯಾಂಕ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ನಾನು ಬ್ಯಾಂಕ ಅಧಿಕಾರಿಗಳು ಈ ರೀತಿ ಹೇಳಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ತನಿಖಾ ಹಂತದಲ್ಲಿ ಬ್ಯಾಂಕಿಗೆ ಭೇಟಿ ನೀಡಿರುತ್ತೇನೆ. ಬ್ಯಾಂಕಿನಲ್ಲಿರುವ ಸಿ ಸಿ ಟಿವಿ ಗಳನ್ನು ಗಮನಿಸಿರುವುದು ಈಗ ನನಗೆ ನೆನಪಿಲ್ಲ.

4 ನೇ ಆರೋಪಿ ಬ್ಯಾಂಕ ಮ್ಯಾನೇಜರ ಅಂದರೆ ನಿಜ. 4 ನೇ ಆರೋಪಿಗೆ ಮೇಲಾಧಿಕಾರಿಗಳು ಎಸ್ ಬಿ ಐ ಲೈಫ ಇನಸೂರೆನ್ಸ ಬಗ್ಗೆ ಜಾಹಿರಾತು ನೀಡಿ ಇಂತಿಷ್ಟು ಪ್ರಕರಣಗಳನ್ನು ಮಾಡಬೇಕೆಂದು ಗುರಿ ನಿಗದಿಪಡಿಸಿರುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. 4 ನೇ ಆರೋಪಿ ಲೈಫ ಇನಸೂರೆನ್ಸ ಪಾಲಿಸಿ ಮಾಡಿಸಿದರೆ ಅವರಿಗೆ ಬ್ಯಾಂಕಿನಿಂದ ಕಮೀಷನ ಬರುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ಪಾಲಿಸಿದಾರರು ಮೋಸ ಆದರೆ 15 ದಿನಗಳಲ್ಲಿ ಅವುಗಳನ್ನು ಹಿಂಪಡೆದುಕೊಳ್ಳಲು ಅವಕಾಶ ಇದೆ ಎನ್ನುವದು ನನಗೆ ಗೊತ್ತಿಲ್ಲ. 1 ರಿಂದ 3 ನೇ ಆರೋಪಿಯು ತನಗೆ ಮೋಸ ಮಾಡಿ 4 ನೇ ಆರೋಪಿ ಪಾಲಿಸಿ ಮಾಡಿಸಿಕೊಂಡಿದ್ದಾರೆ ಯಾವುದೆ ದೂರು ಸಲ್ಲಿಸಿಲ್ಲ. 4 ನೇ ಆರೋಪಿ ಯಾವುದೆ ತಪ್ಪು ಮಾಡಿಲ್ಲ ಎನ್ನುವದು ನನಗೆ ಕಂಡುಬಂದಿದ್ದರೂ ಕೂಡಾ ಅವರು ನನ್ನ ಮಾತು ಕೇಳದೆ ಇದ್ದುದರಿಂದ ಆರೋಪಿಯನ್ನಾಗಿ ಮಾಡಿದ್ದೇನೆ ಅಂದರೆ ಸರಿಯಲ್ಲ. 4 ೦೦ೇ ಆರೋಪಿಯ ಕೃತ್ಯದಲ್ಲಿ ಯಾವುದೆ ಅಪರಾದಿಕ ಉದ್ದೇಶ ಕಂಡುಬರುವುದಿಲ್ಲ ಕೇವಲ ತನ್ನ ಕತ್ಯವದಿಂದ ವಿಮುಖರಾಗಿದ್ದಾರೆ ಎನ್ನುವದು ಮಾತ್ರ ಕಂಡುಬರುತ್ತದೆ ಅಂದರೆ ಸರಿಯಲ್ಲ. 4 ನೇ ಆರೋಪಿ ನನ್ನ ಮಾತು ಕೇಳದೆ ಇದ್ದುದರಿಂದ ಸದರಿಯವರ ವಿರುದ್ಧ ಆರೋಪಿತರನ್ನಾಗಿ ಮಾಡಿದ್ದೇನೆ ಅಂದರೆ ಸರಿಯಲ್ಲ.

ಬ್ಯಾಂಕ ಮ್ಯಾನೇಜರವರಿಗೆ ಎಷ್ಟು ಮೊತ್ತದವರೆಗೆ ಸಾಲ ಮಂಜೂರು ಮಾಡುವ ಅಧಿಕಾರ ಇರುತ್ತದೆ ಎನ್ನುವ ಬಗ್ಗೆ ನಾನು ತನಿಖೆ ಮಾಡಿಲ್ಲ. ಆದರೆ ಗಿರಾಕಿಗಳು ತಾವು ಖರೀದಿಸುವ ವಾಹನದ ಮೇಲೆ ಡೌನ ಪೇಮಂಟ್ ಮಾಡುವ ಆದಾರದ ಮೇಲೆ ಸಾಲ ಮಂಜೂರು ಮಾಡುತ್ತಾರೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. 4 ನೇ ಆರೋಪಿಗೆ ಕೇವಲ 4 ಲಕ್ಷ ರೂ ಮೊತ್ತಕ್ಕೆ ಮಾತ್ರ ಸಾಲ ಮಂಜೂರು ಮಾಡಲು ಅಧಿಕಾರ ಇರುತ್ತದೆ ಹೆಚ್ಚಿನ ಸಾಲ ಕುರಿತು ಮೇಲಾಧಿಕಾರಿಗಳ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ಸಾಲದ ಮೊತ್ತ ರೂ 4 ಲಕ್ಷಕ್ಕೆ ಮೀರಿದರೆ ಮೇಲಾಧಿಕಾರಿಗಳ ಅನುಮತಿಗೆ ಸಲ್ಲಿಸುತ್ತಾರೆ ಅನ್ನುವದು ನನಗೆ ಗೊತ್ತಿಲ್ಲ. ಆರೋಪಿತರಿಗೆ ಮಂಜೂರು ಮಾಡಿದ ಮೊತ್ತ 4 ಲಕ್ಷಗಳಿಗಿಂತ ಹೆಚ್ಚಿಗೆ ಇರುವುದರಿಂದ ಅದನ್ನು ಮಂಜೂರು ಮಾಡುವ ಅಧಿಕಾರ 4 ನೇ ಆರೋಪಿಗೆ ಇರುವುದಿಲ್ಲ ಅಂದರೆ ಸರಿಯಲ್ಲ. ಇದೆ ಕಾರಣಕ್ಕಾಗಿ 4 ನೇ ಆರೋಪಿಯ ವಿರುದ್ಧ ಮಾಡಿದ ಆರೋಪ ಸುಳ್ಳಾಗಿರುತ್ತದೆ ಅಂದರೆ ಸರಿಯಲ್ಲ.

ಪಂಚನಾಮೆ ಸಮಯದಲ್ಲಿ ತೆಗೆದ ನಿಪಿ-3 ಫೋಟೋ ಒಂದೆ ಇರುತ್ತದೆ ಅಂದರೆ ನಿಜ. ಅದನ್ನು ಬೇರೆ ಬೇರೆ ಪ್ರಕರಣಗಳಲ್ಲಿ ಅಳವಡಿಸಿಕೊಂಡಿರುತ್ತೇನೆ. ಪಂಚನಾಮೆ ಸಮಯದಲ್ಲಿ ಚಾಸಾ-1 ರವರು ಮೂಲ ಹಾಗೂ ಜರಾಕ್ಸ ಪ್ರತಿಗಳನ್ನು ಹಾಜರ ಪಡಿಸಿದ್ದರು. ಚಾಸಾ-1 ರವರು ನನ್ನ ಮುಂದೆ ಹಾಜರ ಪಡಿಸಿದ ದಾಖಲೆಗಳನ್ನು ನಾನು

ನ್ಯಾಯಾಲಯಕ್ಕೆ ಹಾಜರ ಪಡಿಸಿರುತ್ತೇನೆ. ಚಾಸಾ-1 ರವರು ನನ್ನ ಮುಂದೆ ಮೂಲ ದಾಖಲೆಗಳನ್ನು ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಂದೆ ಹಾಜರ ಪಡಿಸಿದ ದಾಖಲೆಗಳನ್ನು ನಾನು ತನಿಖೆ ಸಮಯದಲ್ಲಿ ವಿಚಾರಿಸಿದ್ದು ಕಚೇರಿಯಲ್ಲಿ ಇರುವ ಲಭ್ಯ ದಾಖಲೆಗಳನ್ನು ಹಾಜರ ಪಡಿಸಿದ ಬಗ್ಗೆ ಅವರು ತಿಳಿಸಿರುತ್ತಾರೆ.

1 ಆರೋಪಿ ಸಾಲ ಕೋರಿ ಯಾವುದೆ ಅರ್ಜಿ ಸಲ್ಲಿಸಿಲ್ಲ ಹಾಗೂ ಆತನಿಗೆ 4 ನೇ ಆರೋಪಿ ಸಾಲ ಮಂಜುರು ಮಾಡಿಲ್ಲ ಅಂದರೆ ಸರಿಯಲ್ಲ. ಮಂಜೂರಾದ ಸಾಲದ ಹಣವನ್ನು ಧಾರವಾಡದ ಕಾರ್ಪೋರೇಷನ ಬ್ಯಾಂಕ ಶಾಖೆಗೆ ವರ್ಗಾವಣೆ ಆಗುವಂತೆ ಮಾಡಿಕೊಂಡಿರುತ್ತಾರೆ. ಸದರಿಯವರ ಹೆಸರಿನಲ್ಲಿ ಬ್ಯಾಂಕ ಖಾತೆ ಇರಲಿಲ್ಲ ಅಂದರೆ ಸಾಕ್ಷಿ ಸಾಲದ ಹಣ 1 ನೇ ಆರೋಪಿಗೆ ಮಂಜೂರು ಆಗಿರುತ್ತದೆ ಅನ್ನುತ್ತಾರೆ. ನಾನು ಮಾಡಿದ ತನಿಖೆ ಪ್ರಕಾರ ಸಾಲದ ಹಣವನ್ನು ರೇವಣಕರ ಮೋಟರ್ಸ ಹೆಸರಿನಲ್ಲಿ ಆರೋಪಿತರು ಪಡೆದುಕೊಂಡಿರುತ್ತಾರೆ. ರೇವಣಕರ ಮೋಟರ್ಸ ಇವರ ಹೆಸರಿನಲ್ಲಿ ಖಾತೆ ತೆಗೆದಿದ್ದು ಅದನ್ನು ಉಳವಪ್ಪ ಕೋಟಿ ಇವರ ಹೆಸರಿನಲ್ಲಿ ಹಣ ಹಿಂಪಡೆದುಕೊಳ್ಳಲಾಗಿದೆ ಸದರಿ ದಾಖಲೆಯನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಬ್ಯಾಂಕಿನವರು ಸಾಲದ ಹಣವನ್ನು ಉಳವಪ್ಪ ಕೋಟಿರವರ ಖಾತೆಗೆ ವರ್ಗಾಯಿಸಿದ್ದು ಅದನ್ನು ಅವರೆ ಪಡೆದುಕೊಂಡಿದ್ದು 1 ನೇ ಆರೋಪಿಗೆ ಯಾವುದೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

1 ನೇ ಆರೋಪಿ ಕಾರ ಸಾಲ ಪಡೆದುಕೊಳ್ಳಲು ಬ್ಯಾಂಕಿಗೆ ಸಲ್ಲಿಸಿದ ಅರ್ಜಿಯನ್ನು ಹಾಜರ ಪಡಿಸಿರುತ್ತೇನೆ. ಸಾಕ್ಷಿ ದಾಖಲೆಗಳನ್ನು ಪರಿಶೀಲಿಸಿ ನಿಖರವಾಗಿ ಕಾರ ಸಾಲ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ ಎನ್ನುತ್ತಾರೆ. 1 ನೇ ಆರೋಪಿ ಸಾಲ ಬೇಡಿಕೆ ಸಲ್ಲಿಸಿದ ಅರ್ಜಿಯ ಜರಾಕ್ಸ ಪ್ರತಿ ಇರುತ್ತದೆ ಎನ್ನುತ್ತಾರೆ. ನಾನು ಸಲ್ಲಿಸಿದ ದೋಷಾರೋಪಣೆಯಲ್ಲಿ ಮೂಲ ಪ್ರತಿ ಹಾಜರ ಪಡಿಸಿದ ಬಗ್ಗೆ ತಿಳಿಸಿದ್ದೇನೆ ಅಂದರೆ ನಿಜ. 1 ನೇ ಆರೋಪಿ ಸಾಲ ಮಂಜೂರಾತಿ ಕೋರಿ ಯಾವುದೆ ಅರ್ಜಿ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. 1 ನೇ ಆರೋಪಿ ವಿದ್ಯಾರ್ಥಿ ಆಗಿದ್ದು ಆತನನ್ನು ಉದ್ದೇಶಪೂರ್ವಕವಾಗಿ ಪ್ರಕರಣದಲ್ಲಿ ಸೇರಿಸಿದ್ದೇನೆ ಅಂದರೆ ಸರಿಯಲ್ಲ. ಇದೆ ಕಾರಣಕ್ಕಾಗಿ ಮೂಲ ಸಾಲದ ಅರ್ಜಿ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. 1 ನೇ ಆರೋಪಿಯ ಹೇಳಿಕೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಪಡೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಹಾಗೂ ಪುರವಣಿ ಹೇಳಿಕೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಪಡೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ನಮಗೆ ಅನುಕೂಲಸ್ಥ ಸರಕಾರಿ ನೌಕರರನ್ನು ಪಂಚರನ್ನಾಗಿ ಮಾಡಿಕೊಂಡು ಅವರ ಸಹಿ ಪಡೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರ ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಸಾಮಾನ್ಯವಾಗಿ ಕಾರ ಖರೀದಿಸುವಾಗ ಕಾರನ್ನು ಮಾರಾಟರ ಮಾಡುವವರಿಗೆ ಸಾಲದ ಹಣ ವರ್ಗಾವಣೆ ಆಗುತ್ತದೆ ಅಂದರೆ ನಿಜ. ಕಾರನ್ನು ಖರೀದಿದಾರನಿಗೆ ನೀಡುವ

ಮುಂಚೆ ಒಂದು ಕೀಯನ್ನು ಬ್ಯಾಂಕಿನವರು ಪಡೆದುಕೊಳ್ಳುತ್ತಾರೆ ಅಂದರೆ ಸಾಕ್ಷಿ ಖರೀದಿಸುವಾಗ ಪಡೆದುಕೊಳುಳತ್ತಾರೆ ಆದರೆ ಈ ಪ್ರಕರಣದಲ್ಲಿ ಪಡೆದುಕೊಂಡಿಲ್ಲ ಅನ್ನುತ್ತಾರೆ. ಬ್ಯಾಂಕಿನವರು ಮಾಡಿದ ತಪ್ಪನ್ನು ಮುಚ್ಚಿಹಾಕುವ ಸಲುವಾಗಿ ಅವರೊಂದಿಗೆ ಮಿಲಾಪಿಯಾಗಿ ಸುಳ್ಳು ವರದಿ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಚಾಸಾ-1 ರವರು ನೀಡಿದ ದೂರಿನಲ್ಲಿ 3 ನೇ ಆರೋಪಿ ಹೆಸರು ಇರಲಿಲ್ಲ. ಮುಂದಿನ ತನಿಖೆಯಲ್ಲಿ ಆತನ ಭಾಗಿದಾರಿಕೆ ಕಂಡುಬಂದಿದ್ದರಿಂದ ದೋಷಾರೋಪಣೆ ಪಟ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. 3 ನೇ ಆರೋಪಿಗೂ ಪ್ರಕರಣಕ್ಕೂ ಯಾವುದೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಸಾಲ ಮಂಜೂರು ಮಾಡಿದ ನಂತರ ಸಾಲದ ಖಾತೆಗೆ ಜಮಾ ಆಗುತ್ತದೆ ನಂತರ ಡಿಮಾಂಡ್ ಡ್ರಾಫ್ಟ ಮೂಲಕ ಸಂಬಂಧಪಟ್ಟ ಮೋಟರ್ಸ ಕಂಪನಿಯವರಿಗೆ ನೀಡಲಾಗುತ್ತದೆ ಅಂದರೆ ಸರಿಯಲ್ಲ. ನಾನು ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬ್ಯಾಂಕಿನವರು ಮೊದಲು ಸಾಲದ ಖಾತೆಗೆ ಡೌನ್ ಪೇಮೆಂಟ್ ಹಣವನ್ನುಜಮಾ ಮಾಡಿಕೊಂಡು ನಂತರ ಸಾಲದ ಹಣವನ್ನು ಅದಕ್ಕೆ ಜಮೆ ಮಾಡಿ ಅದಾದ ನಂತರ ಪೂರ್ತಿ ಹಣವನ್ನು ಮೋಟರ ವಾಹನ ಮಾಲೀಕರಿಗೆ ನೀಡುತ್ತಾರೆ ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಮೊದಲು ಸಾಲಗಾರರ ಖಾತೆಗೆ ಜಮೆ ಮಾಡಿ ನಂತರ ವಾಹನದ ಕಂಪನಿಯವರಿಗೆ ಹಣ ಜಮೆ ಆಗಿರುತ್ತದೆ ಅಂದರೆ ಸರಿಯಲ್ಲ. ಸಾಲಗಾರರ ಖಾತೆಗೆ ಹಣ ಜಮಾ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**